KATK010056102023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ ಸಂ.125/2023</u>**

ಪ್ರಾ.ಸಾ. ಃ **10**

ದೋ.ಸಾ. ಃ **8**

ದಿ.**09.07.2025**

ಹೆಸರು ಃ ರಾಮಕೃಷ್ಣಯ್ಯ

ತಂದೆಯ ಹೆಸರು ಃ ಕೆಂಪಣ್ಣ

ವಯಸ್ಸು ಃ **81** ವರ್ಷ

ಉದ್ಯೋಗ ಃ ಕಾರ್ಪೆಂಟರ್

ವಾಸಸ್ಥಳ ಃ ಪೀಣ್ಯ **2** ನೇ ಹಂತ ಎಗ್ಗನಹಳ್ಳಿ, ಬೆಂಗಳೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

**1.** ನನ್ನ ಸ್ವಂತ ಊರು ತುಮಕೂರು ತಾಲ್ಲೂಕಿನ ಊರ್ಡಿಗೆರೆ ಹೋಬಳಿ ಅಣ್ಣಪ್ಪನಹಳ್ಳಿ ಗ್ರಾಮ. ಅಣ್ಣಪ್ಪನಹಳ್ಳಿಯಲ್ಲಿರುವ ಪಿತ್ರಾರ್ಜಿತ ಆಸ್ತಿ 2 ಎಕರೆ 17 ಗುಂಟೆಯನ್ನು 25 ವರ್ಷಗಳ ಹಿಂದೆ ಮಾರಾಟ ಮಾಡಿ ಬೆಂಗಳೂರಿನ ಆಂಧ್ರಹಳ್ಳಿಗೆ ಹೋದೆನು. ನನಗೆ ಇಬ್ಬರು ಮಕ್ಕಳು, ಅವರ ಹೆಸರು ಅಣ್ಣಪ್ಪಸ್ವಾಮಿ ಅಲಿಯಾಸ್ ಅರುಣ ಮತ್ತು ಮಂಜುನಾಥ. ಅಣ್ಣಪ್ಪಸ್ವಾಮಿ ಕಾರ್ಪೆಂಟರಿ ಕೆಲಸ ಮಾಡುತ್ತಿದ್ದನು. ಆತ ಹೆಬ್ಬೂರಿನ ಹತ್ತಿರ ಕಾರ್ಪೆಂಟರಿ ಕೆಲಸ ಮಾಡುತ್ತಿದ್ದನು. ಆತ ಹೆಬ್ಬೂರಿನ ಹತ್ತಿರ ಕೆಲಸ ಮಾಡುತ್ತಿರುವಾಗ ಎಲ್ಲಿ ಮಲಗಿಕೊಳ್ಳುತ್ತಿದ್ದನು ಎಂದು ಗೊತ್ತಿಲ್ಲ. ಅಣ್ಣಪ್ಪ ಸ್ವಾಮಿ ಈಗ ಜೈಲಿನಲ್ಲಿದ್ದಾನೆ, ಈಗ ವಿಸಿಯಲ್ಲಿ ಕಾಣುತ್ತಿದ್ದಾನೆ. ನನ್ನ ಮಗ ಅಣ್ಣಪ್ಪ ಸ್ವಾಮಿ ಹೆಬ್ಬೂರಿನಲ್ಲಿ ಗಲಾಟೆ ಮಾಡಿ ಕೊಲೆ ಮಾಡಿದ್ದಾನೆಂದು ಜೈಲಿಗೆ ಹೋಗಿದ್ದಾನೆ. ಆತ ಜೈಲಿಗೆ ಹೋಗಿ 2 ವರ್ಷ 3

ತಿಂಗಳು ಆಗಿದೆ. ನನ್ನ ಮಗ ಜೈಲಿಗೆ ಹೋಗುವ ಹಿಂದಿನ ದಿನ ಆಂಧ್ರಹಳ್ಳಿಗೆ ಬಂದಿದ್ದನು. ಆಂಧ್ರಹಳ್ಳಿಗೆ ಬಂದು ಗಲಾಟೆಯಾಗಿದೆ ಎಂದು ಹೇಳಿ ನನ್ನಿಂದ ಫೋನ್ ತೆಗೆದುಕೊಂಡು ಆತ ತನ್ನ ಮೇಸ್ತ್ರಿಗೆ ಫೋನ್ ಮಾಡಿದನು. ಪೋಲೀಸರಿಗೆ ಈ ವಿಚಾರಗಳನ್ನು ಹೇಳಿದ್ದೇನೆ. ನನ್ನ ಮಗ ನಮ್ಮ ಮನೆಗೆ ಬಂದು ಹೋದ ಮೇಲೆ ಪೋಲೀಸರು ವಶಕ್ಕೆ ತೆಗೆದುಕೊಂಡರು.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**2.** ಆ ದಿನ ಬೆಳಿಗ್ಗೆ **5.30** ಗಂಟೆಗೆ ಬಂದು ಮೇಸ್ತ್ರಿಗೆ ಫೋನ್ ಮಾಡಿ ವಾಪಸ್ ಹೋದನು. ಬೆಳಿಗ್ಗೆ **9.00-9.30** ಗಂಟೆಗೆ ಪೋಲೀಸರು ನಮ್ಮ ಮನೆಗೆ ಬಂದಿದ್ದರು. ನನ್ನ ಹೆಂಡತಿಗೆ ನನ್ನ ಮಗ ಫೋನ್ ಪೇ ಯಿಂದ ಹಣ ಹಾಕುತ್ತಿದ್ದನು. ಅವನ ಮೇಸ್ತ್ರಿ ಕಡೆಯಿಂದ ಫೋನ್ ಪೇ ಮೂಲಕ ಹಣ ಹಾಕುತ್ತಿದ್ದನು. ಮೇಸ್ತ್ರಿಯ ಫೋನ್ ನಂಬರ್ ಗೊತ್ತಿಲ್ಲ. ನನ್ನ ಮಗನ ಬಳಿ ಫೋನ್ ಇತ್ತು ಎಂದರೆ ಸರಿಯಲ್ಲ. ನನ್ನ ಮಗ ಆ ದಿನ ಬಂದಿದ್ದನು, ಗಲಾಟೆ ಮಾಡಿ ಕೊಲೆ ಮಾಡಿದ್ದೇನೆಂದು ಹೇಳಿದನು, ನನ್ನ ಫೋನ್ ತೆಗೆದುಕೊಂಡು ಮೇಸ್ತ್ರಿಗೆ ಫೋನ್ ಮಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು